# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1239

ಮಾನ್ಯ ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 21/08/2025

ಉತ್ತರಿಸುವ ಸಚಿವರು: : ಮಾನ್ಯ ಮುಖ್ಯಮಂತ್ರಿಯವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದ ವಿವಿಧ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಸಾರ್ವಜನಿಕರ ದೈನಂದಿನ ಜೀವನದಲ್ಲಿ ತಲುಪಿಸಲು ಸರ್ಕಾರ ಯಾವ ಯಾವ ಮಾಧ್ಯಮಗಳು ಹಾಗೂ ಮಾರ್ಗಗಳನ್ನು ಬಳಸುತ್ತಿದೆ; (ಸಂಪೂರ್ಣ ವಿವರ ಒದಗಿಸುವುದು). | ಸರ್ಕಾರವು ಜನ ಸಾಮಾನ್ಯರ ಕಲ್ಯಾಣಕ್ಕಾಗಿ ಜಾರಿಗೆ ತರುವ ವಿವಿಧ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಸಾರ್ವಜನಿಕರಿಗೆ ತಲುಪಿಸಲು ವಿವಿಧ ಸಮೂಹ ಮಾಧ್ಯಮಗಳನ್ನು ಬಳಸಿಕೊಂಡು ಸರ್ಕಾರದ ಯೋಜನೆಗಳ ಜಾಹೀರಾತುಗಳನ್ನು ಬಿಡುಗಡೆ ಮಾಡಲಾಗುತ್ತದೆ.<br>**ಮುದ್ರಣ ಮಾಧ್ಯಮ**: ರಾಜ್ಯ ಪ್ರಾದೇಶಿಕ ಮತ್ತು ಜಿಲ್ಲಾ ಪತ್ರಿಕೆಗಳ ಮೂಲಕ ಆಕರ್ಷಕ ಜಾಹೀರಾತುಗಳನ್ನು ಮತ್ತು ಶೇ 60:40ರ ಅನುಪಾತದಲ್ಲಿ ವಿಶೇಷ ಪುರವಣಿಗಳನ್ನು ಪ್ರಕಟಿಸಲಾಗುತ್ತದೆ.<br>**ವಿದ್ಯುನ್ಮಾನ ಮಾಧ್ಯಮ**: ಟಿ.ವಿ., ರೇಡಿಯೋ ಮತ್ತು ಚಲನಚಿತ್ರ ಮಂದಿರ, ರೈಲ್ವೆ, ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಗಳಲ್ಲಿ ಅಳವಡಿಸಿರುವ ಟಿ.ವಿ.ಫಲಕಗಳು ಮತ್ತು ಶ್ರವ್ಯ ಮಾಧ್ಯಮಗಳ ಮೂಲಕ ಹಾಗೂ ಡಿಜಿಟಲ್ ಮಾಧ್ಯಮಗಳನ್ನು ಬಳಸಿಕೊಂಡು ಜಾಹೀರಾತುಗಳನ್ನು ಪ್ರಸಾರ ಮಾಡಲಾಗುತ್ತದೆ.<br>ಟಿ.ವಿ. ವಾಹಿನಿಗಳಲ್ಲಿ ಸರ್ಕಾರದ ಯೋಜನೆಗಳ ಕುರಿತು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಚಿವರುಗಳ ಸಂದರ್ಶನ ಮತ್ತು ಸರ್ಕಾರದ ವಿಶೇಷ ಕಾರ್ಯಕ್ರಮಗಳನ್ನು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಶಂಕುಸ್ಥಾಪನೆ ಮತ್ತು ಉದ್ಘಾಟಿಸಲಿರುವ ಕಾರ್ಯಕ್ರಮಗಳನ್ನು ಸುದ್ದಿ ವಾಹಿನಿಗಳಲ್ಲಿ ನೇರ ಪ್ರಸಾರ ಮಾಡಲಾಗುವುದು.<br>ಇಲಾಖಾ ಒಡೆತನದ ಪ್ರಚಾರ ಫಲಕ, ಖಾಸಗಿ ಪ್ರಚಾರ ಫಲಕ, ಬಸ್ ಬ್ರ್ಯಾಂಡಿಂಗ್, ಆಟೋ ಬ್ರ್ಯಾಂಡಿಂಗ್, ಟ್ರೈನ್ ಬ್ರ್ಯಾಂಡಿಂಗ್, ಕಿರು ಪುಸ್ತಕಗಳ ಪ್ರಕಟಣೆಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ. |
| ಆ) | ಸರ್ಕಾರ ತನ್ನ ಹಲವು ಕಾರ್ಯಕ್ರಮಗಳ ಯೋಜನೆಗಳ ಪ್ರಚಾರಕ್ಕಾಗಿ ಜಾಹೀರಾತು ನೀಡುವ ಸಂದರ್ಭದಲ್ಲಿ ಯಾವುದೇ ವ್ಯಯ ಮಿತಿ ನಿಗದಿ ಪಡಿಸಿರುವುದೇ ; | ಸರ್ಕಾರವು ಪತ್ರಿಕೆಗಳ ಪ್ರಸಾರ ಸಂಖ್ಯೆಗೆ ಅನುಗುಣವಾಗಿ ಅಂಗೀಕೃತ ದರವನ್ನು ನಿಗದಿಪಡಿಸಲಾಗಿದ್ದು, ಸದರಿ ದರಗಳನ್ವಯ ಹಾಗೂ ರಾಷ್ಟ್ರಮಟ್ಟದ ಪತ್ರಿಕೆಗಳಿಗೆ ಕೇಂದ್ರ ಸರ್ಕಾರದ ಡಿ.ಎ.ವಿ.ಪಿ. (ಬಿ.ಒ.ಸಿ) ನಿಗದಿಪಡಿಸಿರುವ ದರಗಳನ್ವಯ ಜಾಹೀರಾತು ಬಿಡುಗಡೆ ಮಾಡಲಾಗುತ್ತದೆ. ಅದೇ ರೀತಿ ಟಿ.ವಿ. ವಾಹಿನಿಗಳಿಗೆ ಬಾರ್ಕ್ ಸಂಸ್ಥೆ ನೀಡುವ ವೀಕ್ಷಕರ ಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸಿರುವ ಜಾಹೀರಾತು ದರದಂತೆ ಮತ್ತು ರೇಡಿಯೋ ಹಾಗೂ ಇತರೆ ಸಮೂಹ ಮಾಧ್ಯಮಗಳಿಗೆ ಕೇಂದ್ರ ಸರ್ಕಾರದ ಡಿ.ಎ.ವಿ.ಪಿ. (ಬಿ.ಒ.ಸಿ) ನಿಗದಿಪಡಿಸಿರುವ ದರಗಳಂತೆ ಜಾಹೀರಾತು ಬಿಡುಗಡೆ ಮಾಡಲಾಗುತ್ತದೆ.<br>ವಿವಿಧ ಸಮೂಹ ಮಾಧ್ಯಮಗಳಿಗೆ ಸರ್ಕಾರದಿಂದಲೇ ಜಾಹೀರಾತು ದರಗಳನ್ನು ನಿಗದಿಪಡಿಸಿರುವುದರಿಂದ ಮಾಹಿತಿ, |

| | | |
|---|---|---|
| | | ಶಿಕ್ಷಣ ಹಾಗೂ ಸಂವಹನ ಚಟುವಟಿಕೆಗಳಡಿ ಜಾಹೀರಾತು ವೆಚ್ಚಗಳಿಗೆ ಸರ್ಕಾರವು ನಿಗದಿಪಡಿಸಿರುವ ಅನುದಾನದ ಮಿತಿಯಲ್ಲಿ ಯೋಜನೆ ರೂಪಿಸಿಕೊಂಡು ವಿವಿಧ ಸಮೂಹ ಮಾಧ್ಯಮಗಳ ಮುಖಾಂತರ ಯೋಜನೆ ರೂಪಿಸಿಕೊಂಡು ಸರ್ಕಾರದ ಜನಪರ ಯೋಜನೆಗಳ ಪ್ರಚಾರ ಕಾರ್ಯ ಕೈಗೊಳ್ಳಲಾಗುತ್ತಿದೆ. |
| ಇ) | ರಾಜ್ಯದಲ್ಲಿ ಜಾಹೀರಾತು ನೀತಿ advertisement policy ಇದೆಯೇ ಇತ್ತೀಚೆಗೆ ಈ ಜಾಹೀರಾತು ನೀತಿಯಲ್ಲಿ ಯಾವುದಾದರೂ ಬದಲಾವಣೆಗಳಾಗಿದೆಯೇ, ಆಗಿದ್ದಲ್ಲಿ ವಿವರ ಒದಗಿಸುವುದು ; | ಸರ್ಕಾರವು ಸಣ್ಣ ಮತ್ತು ಮಧ್ಯಮ ವರ್ಗದ ಪತ್ರಿಕೆಗಳಿಗೆ ಬೆಳವಣಿಗೆಗಾಗಿ ಜಾರಿಗೆ ತರಲಾಗಿರುವ ಜಾಹೀರಾತು ನೀತಿ-2013 ಜಾಹೀರಾತು ಅನುಷ್ಠಾನ ನಿಯಮಗಳು- 2014 ಪ್ರಸ್ತುತ ಜಾರಿಯಲ್ಲಿರುತ್ತದೆ.<br>ಜಾಹೀರಾತು ಅನುಷ್ಠಾನ ನಿಯಮಗಳು ಜಾರಿಗೆ ಬಂದು ಹತ್ತು ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಜಾಹೀರಾತು ಅನುಷ್ಠಾನ ನಿಯಮಗಳನ್ನು ಪರಿಷ್ಕರಿಸಲು ಉದ್ದೇಶಿಸಿ ಪರಿಷ್ಕೃತ ಕರಡು ಜಾಹೀರಾತು ಅನುಷ್ಠಾನ ನಿಯಮಗಳನ್ನು ತಯಾರಿಸಲಾಗಿದ್ದು, ಸರ್ಕಾರದಲ್ಲಿ ಪರಿಶೀಲನೆಯ ಹಂತದಲ್ಲಿರುತ್ತದೆ. |
| ಈ) | ಈ ಜಾಹೀರಾತು ನೀತಿಯ ಪ್ರಕಾರ ಸರ್ಕಾರ ನೀಡುವ ಜಾಹೀರಾತುಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಮುದ್ರಿತ ಮಾಧ್ಯಮಗಳ ಮೂಲಕ ಸಮುಚಿತವಾಗಿ ವಿತರಣೆ ಮಾಡಲಾಗುತ್ತಿದೆಯೇ ; | ಪ್ರಸ್ತುತ ಜಾರಿಯಲ್ಲಿರುವ ಜಾಹೀರಾತು ಅನುಷ್ಠಾನ ನಿಯಮಗಳನ್ವಯ, ಮಾಧ್ಯಮ ಪಟ್ಟಿಯಲ್ಲಿರುವ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಸಂದರ್ಭಾನುಸಾರ ರಾಜ್ಯ, ರಾಷ್ಟ್ರೀಯ ಹಬ್ಬ, ಮಹನೀಯರ ಜಯಂತಿ ಮತ್ತು ಸರ್ಕಾರದ ಸಾಧನೆ ಹಾಗೂ ಯೋಜನೆ/ ಕಾರ್ಯಕ್ರಮಗಳ ಕುರಿತು ಆಕರ್ಷಕ ಮತ್ತು ಪ್ರೋತ್ಸಾಹ ರೂಪದ ಜಾಹೀರಾತುಗಳನ್ನು ಸಮುಚಿತವಾಗಿ ಬಿಡುಗಡೆ ಮಾಡಲಾಗುತ್ತಿದೆ. |
| (ಉ) | 2023-24 ಮತ್ತು 2024-25ನೇ ಸಾಲಿನಲ್ಲಿ ಪತ್ರಿಕೆಗಳ ಮೂಲಕ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ನೀಡಲಾಗಿರುವ ಜಾಹೀರಾತುಗಳಾವುವು; (ಪ್ರತ್ಯೇಕ ಪಟ್ಟಿಯನ್ನು ಇಲಾಖಾವಾರು ನೀಡುವುದು). | ಅನುಬಂಧ ಲಗತ್ತಿಸಿದೆ. |
| (ಊ) | ಕಳೆದ ಎರಡು ವರ್ಷದಲ್ಲಿ ಈ ಜಾಹೀರಾತುಗಳಲ್ಲಿ ಯಾವುದೇ ಮಾಧ್ಯಮ ಸಂಸ್ಥೆಗೆ ಅನುಚಿತವಾಗಿ ಹೆಚ್ಚಿನ ಪ್ರಮಾಣದ ಹಣ ಬಿಡುಗಡೆ ಆಗಿರುವ ಬಗ್ಗೆ ಯಾವುದಾದರೂ ಆಡಿಟ್ ವರದಿ ಅಥವಾ ಪರಿಶೀಲನೆ ನಡೆದಿದೆಯೆ? (ನಡೆದಿದ್ದಲ್ಲಿ ಸಂಪೂರ್ಣ ವಿವರ ಒದಗಿಸುವುದು). | ಇರುವುದಿಲ್ಲ. |

**ಸಂ: ಕೆಸಿಐ-ಪಿಐಪಿ/217/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

**ಅನುಬಂಧ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2023-24 ನೇ ಸಾಲಿನಲ್ಲಿ ಪತ್ರಿಕೆಗಳಿಗೆ ಬಿಡುಗಡೆ ಮಾಡಲಾದ ಜಾಹೀರಾತು ವಿವರ**

| ಕ್ರ.ಸಂ | ಜಾಹೀರಾತು |
|---|---|
| 1 | ಡಾ.ಬಾಬು ಜಗಜೀವನ್ ರಾಂ ರವರ 116 ನೇ ಜನ್ಮ ದಿನಾಚರಣೆ ಕುರಿತು ಪತ್ರಿಕಾ ಜಾಹೀರಾತು |
| 2 | ಡಾ. ಬಿ.ಆರ್. ಅಂಬೇಡ್ಕರ್ ರವರ 132 ನೇ ಜನ್ಮ ದಿನಾಚರಣೆ ಅಂಗವಾಗಿ ಪತ್ರಿಕಾ ಜಾಹೀರಾತು |
| 3 | ನೂತನ ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳ ಕುರಿತ ಮಾಹಿತಿಯುಳ್ಳ ಪತ್ರಿಕಾ ಜಾಹೀರಾತು |
| 4 | ನೂತನ ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳ ಅನುಷ್ಠಾನ ಮಾಹಿತಿಯುಳ್ಳ ಪತ್ರಿಕಾ ಜಾಹೀರಾತು |
| 5 | ಸರ್ಕಾರವು ಜಾರಿಗೆ ತಂದಿರುವ ಮಹಿಳೆಯರಿಗೆ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ "ಶಕ್ತಿ" ಯೋಜನೆ ಚಾಲನೆ ಕುರಿತು ಪತ್ರಿಕಾ ಜಾಹೀರಾತು |
| 6 | "ಡ್ರಗ್ಸ್ ಫ್ರೀ ಡೆ" ಕುರಿತು ಪತ್ರಿಕಾ ಜಾಹೀರಾತು |
| 7 | ಕೆಂಪೇಗೌಡ ಜಯಂತಿ ಕುರಿತು ಪತ್ರಿಕಾ ಜಾಹೀರಾತು |
| 8 | ಡಾ. ಬಾಬು ಜಗಜೀವನ್ ರಾಂ ರವರ ಪುಣ್ಯ ಸ್ಮರಣೆ ಕುರಿತು ಪತ್ರಿಕಾ ಜಾಹೀರಾತು |
| 9 | ನೂತನ ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳು ಕುರಿತ ಪತ್ರಿಕಾ ಜಾಹೀರಾತು ಕುರಿತು |
| 10 | ಅನ್ನಭಾಗ್ಯ ಯೋಜನೆ ಕುರಿತು ಪತ್ರಿಕಾ ಜಾಹೀರಾತು |
| 11 | ಗೃಹಜ್ಯೋತಿ ಯೋಜನೆ ಕುರಿತು ಪತ್ರಿಕಾ ಜಾಹೀರಾತು |
| 12 | 77ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಸನ್ಮಾನ್ಯ ಮುಖ್ಯಮಂತ್ರಿಗಳ ನಾಡಿನ ಜನತೆಗೆ ಶುಭಾಶಯ ಕೋರಿರುವ ಕುರಿತ ಪತ್ರಿಕಾ ಜಾಹೀರಾತು |
| 13 | ಚಂದ್ರಯಾನ ಯಶಸ್ವಿ ಕುರಿತು ಪತ್ರಿಕಾ ಜಾಹೀರಾತು |
| 14 | ಗೃಹ ಲಕ್ಷ್ಮೀ ಯೋಜನೆ ಕುರಿತು ಪತ್ರಿಕಾ ಜಾಹೀರಾತು |
| 15 | ಸರ್ಕಾರದ 100 ದಿವಸಗಳ ಸಾಧನೆ ಕುರಿತ ಪತ್ರಿಕಾ ಜಾಹೀರಾತು |
| 16 | ಸರ್ಕಾರದ ಯೋಜನೆಗಳ ಕುರಿತು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವಿಶೇಷ ಪುರವಣಿ |
| 17 | ಸಂವಿಧಾನ ಪೀಠಿಕೆ ವಾಚನ ಕುರಿತು ಪತ್ರಿಕಾ ಜಾಹೀರಾತು |
| 18 | ಗೃಹಲಕ್ಷ್ಮೀ ಯೋಜನೆಗೆ ಚಾಲನೆ ನೀಡಿದ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು |
| 19 | ಸರ್ಕಾರದ ಪ್ರಮುಖ ಯೋಜನೆಗಳಾದ ಶಕ್ತಿ ಅನ್ನಭಾಗ್ಯ ಗೃಹಜ್ಯೋತಿ, ಗೃಹಲಕ್ಷ್ಮೀ ಯೋಜನೆಗಳ ಕುರಿತು ವಿಶೇಷ ಪುರವಣಿಯನ್ನು 60:40 ಅನುಪಾತದಲ್ಲಿ ಪ್ರಕಟಿಸುವ ಕುರಿತು |
| 20 | ಸಂವಿಧಾನ ಪೀಠಿಕೆ ವಾಚನಕ್ಕೆ ಕರೆ ನೀಡುವ ಕುರಿತು ಪತ್ರಿಕಾ ಜಾಹೀರಾತು |
| 21 | ಸಂವಿಧಾನ ಪೀಠಿಕೆ ವಾಚನ ಓದುವ ಕಾರ್ಯಕ್ರಮ ಕುರಿತು ಪತ್ರಿಕಾ ಜಾಹೀರಾತು |
| 22 | ಸಂವಿಧಾನ ಪೀಠಿಕೆ ವಾಚನ ಕಾರ್ಯಕ್ರಮ ಯಶಸ್ವಿ ಕುರಿತು ಪತ್ರಿಕಾ ಜಾಹೀರಾತು |
| 23 | ರಾಜ್ಯ ಮಟ್ಟದ ಜನತಾದರ್ಶನ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು |
| 24 | ಸರ್ಕಾರದ ಯೋಜನೆಗಳ ಕುರಿತು ಪ್ರಮುಖ ದಿನಪತ್ರಿಕೆಗಳಲ್ಲಿ ವಿಶೇಷ ಪುರವಣಿ |
| 25 | ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಪ್ರಧಾನ ಸಮಾರಂಭ ಕುರಿತ ಪತ್ರಿಕಾ ಜಾಹೀರಾತು |
| 26 | 154ನೇ ಗಾಂಧಿ ಜಯಂತಿ ಆಚರಣೆ ಪ್ರಯುಕ್ತ ಸನ್ಮಾನ್ಯ ಮುಖ್ಯಮಂತ್ರಿಗಳು ನಾಡಿನ ಜನತೆಗೆ ಶುಭಾಷಯ ಕೋರುವ ಕುರಿತ ಪತ್ರಿಕಾ ಜಾಹೀರಾತು |
| 27 | ಮೈಸೂರು ದಸರಾ-2023 ರ ಉದ್ಘಾಟನಾ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು |
| 28 | ಶ್ರೀರಂಗಪಟ್ಟಣ ದಸರಾ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು |
| 29 | ಪೊಲೀಸ್ ಹುತಾತ್ಮರ ದಿನಾಚರಣೆ ಕುರಿತು ಪತ್ರಿಕಾ ಜಾಹೀರಾತು |
| 30 | ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಸರ್ಕಾರದ ಯೋಜನೆಗಳ ಕುರಿತು ಜಾಹೀರಾತು |
| 31 | ಕಿತ್ತೂರು ಉತ್ಸವ 2023 ಕಾರ್ಯಕ್ರಮ ಕುರಿತು ಪತ್ರಿಕಾ ಜಾಹೀರಾತು |
| 32 | ವಿಜಯದಶಮಿ ಜಂಬೂಸವಾರಿ ಹಾಗೂ ಶುಭಾಶಯ ಕುರಿತ ಪತ್ರಿಕಾ ಜಾಹೀರಾತು |
| 33 | ಸರ್ಕಾರದ ಯೋಜನೆಗಳ ಕುರಿತು ಸುಧಾ, ಉದಯವಾಣಿ ವಿಶೇಷಾಂಕದಲ್ಲಿ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯವರ ಕನ್ನಡ ರಾಜ್ಯೋತ್ಸವ ಕುರಿತು ವಿಶೇಷ ಸಂಚಿಕೆಯಲ್ಲಿ ಪ್ರಕಟಣೆ |
| 34 | 50ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ ಸಂಬಂಧ ಸನ್ಮಾನ್ಯ ಮುಖ್ಯಮಂತ್ರಿಗಳು ನಾಡಿನ ಜನತೆಗೆ ಶುಭಾಶಯ ಕೋರುವ ಪತ್ರಿಕಾ ಜಾಹೀರಾತು |
| 35 | ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಕನ್ನಡ ರಾಜ್ಯೋತ್ಸವ ಕುರಿತು ಜಾಹೀರಾತು |

| | |
|---|---|
| 36 | ಔಟ್ ಲುಕ್ ಪತ್ರಿಕೆಯಲ್ಲಿ ಸರ್ಕಾರದ ಯೋಜನೆಗಳ ಕುರಿತು ಪ್ರಕಟಣೆ |
| 37 | ಶ್ರೀಮತಿ ಇಂದಿರಾ ಗಾಂಧಿ ಇವರ 106ನೇ ಜನ್ಮದಿನಾಚರಣೆ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು |
| 38 | ಸರ್ಕಾರದ 6 ತಿಂಗಳ ಸಾಧನೆ / ಯೋಜನೆಗಳ ಕುರಿತ ಜಾಹೀರಾತನ್ನು ಪತ್ರಿಕೆಗಳಲ್ಲಿ ಬಿಡುಗಡೆ. |
| 39 | ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಶತಮಾನೋತ್ಸವ ಭವನ ಉದ್ಘಾಟನೆ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು |
| 40 | ಶಕ್ತಿ ಯೋಜನೆ ಕುರಿತು ಪತ್ರಿಕಾ ಜಾಹೀರಾತು |
| 41 | ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಸರ್ಕಾರದ ಯೋಜನೆಗಳ ಕುರಿತು ವಿಶೇಷ ಪುರವಣಿ ಪ್ರಕಟಣೆ |
| 42 | ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಇಂದಿರಾಗಾಂಧಿ ಜನ್ಮ ದಿನಾಚರಣೆ ಕುರಿತು ಜಾಹೀರಾತು |
| 43 | ಬೆಂಗಳೂರು ನಗರ ಸೇಫ್ ಸಿಟಿ ಯೋಜನೆಯಡಿಯಲ್ಲಿ ನಿರ್ಮಿಸಲಾಗಿರುವ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ಕಟ್ಟಡದ ಉದ್ಘಾಟನೆ ಸಮಾರಂಭದ ಪತ್ರಿಕಾ ಜಾಹೀರಾತು |
| 44 | ರಾಜ್ಯ ಮಟ್ಟದ ಜನತಾದರ್ಶನ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು |
| 45 | 21ನೇ ಚಿತ್ರಸಂತೆ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು |
| 46 | ಕ್ರಾಂತಿವೀರ ಸಂಗೋಳ್ಳಿ ರಾಯಣ್ಣ ಉತ್ಸವ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು |
| 47 | ಸಮಾಜ ಸುಧಾರಣೆ ಮಹಾನಾಯಕರ ಶ್ರೇಷ್ಠ ಮೌಲ್ಯಗಳ ಮರುಸ್ಥಾಪನೆ ಕುರಿತ ಪತ್ರಿಕಾ ಜಾಹೀರಾತು |
| 48 | ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಯುವ ನಿಧಿ ಯೋಜನೆ ಕುರಿತು ಜಾಹೀರಾತು |
| 49 | ನಮ್ಮ ಹಕ್ಕು ನಮ್ಮ ಸಂವಿಧಾನ ಪತ್ರಿಕಾ ಜಾಹೀರಾತು |
| 50 | ಗಣರಾಜ್ಯೋತ್ಸವದ ಪ್ರಯುಕ್ತ ಸನ್ಮಾನ್ಯ ಮುಖ್ಯಮಂತ್ರಿಗಳ ನಾಡಿನ ಜನತೆಗೆ ಶುಭಾಶಯ ಕೋರುವ ಪತ್ರಿಕಾ ಜಾಹೀರಾತು |
| 51 | ತುಮಕೂರು ಜಿಲ್ಲೆ ವ್ಯಾಪ್ತಿಯ ವಿವಿಧ ಕಾಮಗಾರಿಗಳ ಉದ್ಘಾಟನಾ / ಶಂಕುಸ್ಥಾಪನಾ ಹಾಗೂ ಇನ್ನಿತರೆ ಕಾರ್ಯಕ್ರಮಗಳ ಕುರಿತ ಪತ್ರಿಕಾ ಜಾಹೀರಾತು |
| 52 | ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಗಣರಾಜ್ಯೋತ್ಸವ ಹಾಗೂ ಸಂವಿಧಾನ ಕುರಿತು ಜಾಹೀರಾತು |
| 53 | ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಸರ್ಕಾರದ ಯೋಜನೆಗಳ ಕುರಿತು ವಿಶೇಷ ಪುರವಣಿ ಪ್ರಕಟಣೆ |
| 54 | ಜನ ಸ್ಪಂದನಾ ಕಾರ್ಯಕ್ರಮದ ಪತ್ರಿಕಾ ಜಾಹೀರಾತು ಬಿಡುಗಡೆ. |
| 55 | "ನನ್ನ ತೆರಿಗೆ ನನ್ನ ಹಕ್ಕು" ಕುರಿತ 'ಚಲೋ ದಿಲ್ಲಿ'ಕುರಿತ ಪತ್ರಿಕಾ ಜಾಹೀರಾತು |
| 56 | ನನ್ನ ಜನ-ಜನ್ನ ಹೆಮ್ಮೆ ಪತ್ರಿಕಾ ಜಾಹೀರಾತು ಬಿಡುಗಡೆ |
| 57 | ಸಂವಿಧಾನ ಜಾಗೃತಿ ಜಾಥಾ ಪತ್ರಿಕಾ ಜಾಹೀರಾತು |
| 58 | ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ವಿವಿಧ ಇಲಾಖೆಗಳ ಕಾಮಗಾರಿಗಳ ಉದ್ಘಾಟನೆ / ಶಂಕುಸ್ಥಾಪನೆ ಕಾರ್ಯಕ್ರಮಗಳ ಕುರಿತ ಪತ್ರಿಕಾ ಜಾಹೀರಾತು |
| 59 | ನಮ್ಮ ಸಂವಿಧಾನ ನನ್ನ ಜೀವನ ಪತ್ರಿಕಾ ಜಾಹೀರಾತು |
| 60 | ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಕುರಿತು ಪತ್ರಿಕಾ ಜಾಹೀರಾತು |
| 61 | ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶ ಕಾರ್ಯಕ್ರಮ ಕುರಿತು ಪತ್ರಿಕಾ ಜಾಹೀರಾತು |
| 62 | 15ನೇ ಅಂತರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನಾ ಕಾರ್ಯಕ್ರಮದ ಪತ್ರಿಕಾ ಜಾಹೀರಾತು |
| 63 | ಆಯವ್ಯಯದಲ್ಲಿನ ಅಂಶಗಳ ಕುರಿತು ದಿನಪತ್ರಿಕೆಗಳಲ್ಲಿ ವಿಶೇಷ ಪುರವಣಿ ಪ್ರಕಟಿಸುವ ಕುರಿತು |
| 64 | ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಕೃಷಿ ಇಲಾಖೆಯ ಕಾರ್ಯಕ್ರಮಗಳ ಕುರಿತು ವಿಶೇಷ ಪುರವಣಿ. |
| 65 | ಹಾಸನ ಜಿಲ್ಲೆಯಲ್ಲಿನ ಅಭಿವೃದ್ಧಿ ಕಾರ್ಯಗಳ ಶಂಕುಸ್ಥಾಪನಾ ಕಾರ್ಯಕ್ರಮ ಕುರಿತು ಪತ್ರಿಕಾ ಜಾಹೀರಾತು |
| 66 | ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕುರಿತು ಪತ್ರಿಕಾ ಜಾಹೀರಾತು |
| 67 | ಹೊಸಕೋಟೆಯಲ್ಲಿ ವಿವಿಧ ಸರ್ಕಾರಿ ಕಾಮಗಾರಿಗಳ ಉದ್ಘಾಟನಾ ಮತ್ತು ಶಂಕುಸ್ಥಾಪನೆ ಹಾಗೂ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು ಬಿಡುಗಡೆ |
| 68 | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿವಿಧ ಸರ್ಕಾರಿ ಕಾಮಗಾರಿಗಳ ಉದ್ಘಾಟನಾ ಮತ್ತು ಶಂಕುಸ್ಥಾಪನೆ ಹಾಗೂ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು ಬಿಡುಗಡೆ |
| 69 | ಚಾಮರಾಜನಗರ ಜಿಲ್ಲೆಯ ಸರ್ಕಾರದ ವಿವಿಧ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು ಬಿಡುಗಡೆ |
| 70 | ಮೈಸೂರು ಜಿಲ್ಲೆಯಲ್ಲಿ ಜಿಲ್ಲೆಯ ವಿವಿಧ ಸರ್ಕಾರಿ ಕಾಮಗಾರಿಗಳ ಉದ್ಘಾಟನಾ ಮತ್ತು ಶಂಕುಸ್ಥಾಪನೆ |

| | |
|---|---|
| | ಹಾಗೂ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು ಬಿಡುಗಡೆ |
| 71 | ಸರ್ಕಾರದ ಯೋಜನೆಗಳ ಕುರಿತು ಪತ್ರಿಕಾ ಬಿಡುಗಡೆ |
| 72 | ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ಸರ್ಕಾರಿ ಕಾಮಗಾರಿಗಳ ಉದ್ಘಾಟನಾ ಮತ್ತು ಶಂಕುಸ್ಥಾಪನೆ ಹಾಗೂ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮ ಕುರಿತ ಪತ್ರಿಕಾ ಜಾಹೀರಾತು ಬಿಡುಗಡೆ |
| 73 | ವಾರ್ತಾ ಭಾರತಿ ಪತ್ರಿಕೆಯಲ್ಲಿ ಜಾಹೀರಾತು ಬಿಡುಗಡೆ ಮಾಡುವ ಕುರಿತು |

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2024-25 ನೇ ಸಾಲಿನಲ್ಲಿ ಪತ್ರಿಕೆಗಳಿಗೆ ಬಿಡುಗಡೆ ಮಾಡಲಾದ ಜಾಹೀರಾತು ವಿವರ**

| ಕ್ರ.ಸಂ | ಜಾಹೀರಾತು ವಿಷಯ |
|---|---|
| 1 | ಡಾ.ಬಾಬು ಜನಜೀವನರಾಂ ಭವನದ ಉದ್ಘಾಟನೆ ಕುರಿತು ಪತ್ರಿಕಾ ಜಾಹೀರಾತು |
| 2 | ಸರ್ಕಾರದ ಯೋಜನೆಗಳ ಕುರಿತು ಆಂದೋಲನ ಪತ್ರಿಕೆಯಲ್ಲಿ ವಿಶೇಷ ಪುರವಣಿ |
| 3 | ಸನ್ಮಾನ್ಯ ಮುಖ್ಯಮಂತ್ರಿಗಳ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿರುವ ಕಾರ್ಯಕ್ರಮಗಳ ಕುರಿತು ಪುರವಣಿಯನ್ನು ಪತ್ರಿಕೆಗಳಲ್ಲಿ ಪ್ರಕಟಣೆ |
| 4 | ಸನ್ಮಾನ್ಯ ಮುಖ್ಯಮಂತ್ರಿಗಳು ತಿಳಿಸಿರುವ ಕಾರ್ಯಕ್ರಮಗಳ ಕುರಿತು ಪುರವಣಿಯನ್ನು ಪತ್ರಿಕೆಗಳಲ್ಲಿ ಪ್ರಕಟಣೆ |
| 5 | ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಸರ್ಕಾರದ ಯೋಜನೆಗಳ /ಕಾರ್ಯಕ್ರಮಗಳ ಕುರಿತು ಪುರವಣಿ ಪ್ರಕಟಣೆ |
| 6 | ದಿ. ಬಿ.ರಾಚಯ್ಯ ರವರ ಸ್ಮಾರಕ ಉದ್ಘಟನಾ ಸಮಾರಂಭ ಕಾರ್ಯಕ್ರಮ ಕುರಿತು ಜಾಹೀರಾತು |
| 7 | ಸ್ವಾತಂತ್ರ್ಯ ದಿನಾಚರಣೆ ಕುರಿತು ಪತ್ರಿಕಾ ಜಾಹೀರಾತು ಪ್ರಕಟಣೆ. |
| 8 | ಕಂದಾಯ ಇಲಾಖೆಯಲ್ಲಿ ನೋಂದಣಿ ಕುರಿತಾದ ಪತ್ರಿಕಾ ಜಾಹೀರಾತು |
| 9 | ದಿನಾಂಕ: 15-09-2024 ರಂದು ಆಚರಿಸಲಾಗುವ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರನೆ ಕುರಿತು ಪತ್ರಿಕಾ ಜಾಹೀರಾತು. |
| 10 | ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕುರಿತು ಜಾಹೀರಾತು |
| 11 | ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ ಆಚರಿಸಲಾಗುವ ಗಗನಚುಕ್ಕಿ ಜಲಪಾತೋತ್ಸ ಉದ್ಘಾಟನೆ ಕಾರ್ಯಕ್ರಮ ಕುರಿತು |
| 12 | ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾರಣೆ ಮಾನವ ಸರಪಳಿ ಜಾಹೀರಾತು ಕುರಿತು |
| 13 | ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾರಣೆ ಯಶಸ್ವಿ ಕುರಿತು ರಾಜ್ಯದ ಜನತೆಗೆ ಧನ್ಯವಾದ ಅರ್ಪಿಸುವ ಕುರಿತು ಪತ್ರಿಕಾ ಜಾಹೀರಾತು |
| 14 | ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಹಾಗೂ ಪ್ರಧಾನ ಸಮಾರಂಭ ಕುರಿತು ಪತ್ರಿಕಾ ಜಾಹೀರಾತು. |
| 15 | 155ನೇ ಗಾಂಧಿ ಜಯಂತಿ ಮತ್ತು ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರ 120ನೇ ಜನ್ಮದಿನಾಚರಣೆ ಪ್ರಯುಕ್ತ ಸನ್ಮಾನ್ಯ ಮುಖ್ಯಮಂತ್ರಿಕಗಳ ಪತ್ರಿಕಾ ಜಾಹೀರಾತು ಕುರಿತು. |
| 16 | ಮೈಸೂರು ದಸರಾ ಉದ್ಘಟನಾ ಕಾರ್ಯಕ್ರಮ ಕುರಿತು |
| 17 | ಶ್ರೀರಂಗಪಟ್ಟಣದಲ್ಲಿ ದಸರಾ ಉದ್ಘಾಟನಾ ಕಾರ್ಯಕ್ರಮ ಕುರಿತು |
| 18 | ಗೋಕಾಕ್ ಚಳುವಳಿ ಕುರಿತಾ ಪತ್ರಿಕಾ ಜಾಹೀರಾತು |
| 19 | ತುಮಕೂರು ದಸರಾ 2024 ವಿಜಯದಶಮಿ ಮೆರವಣಿಗೆ ಕಾರ್ಯಕ್ರಮ ಪತ್ರಿಕಾ ಜಾಹೀರಾತು ಕುರಿತು |
| 20 | ನಾಡ ಹಬ್ಬ ಮೈಸೂರು ದಸರಾ ಆಚರಣೆಯ ವಿಜಯದಶಮಿ ಪ್ರಯುಕ್ತ ಜಂಬೂಸವಾರಿ ಕಾರ್ಯಕ್ರಮ ಕುರಿತು ಪತ್ರಿಕಾ ಜಾಹೀರಾತು |
| 21 | ಶ್ರೀ ವಾಲ್ಮೀಕಿ ಜಯಂತಿ ಹಾಗೂ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರಧಾನ ಸಮಾರಂಭ ಕುರಿತು ಪತ್ರಿಕಾ ಜಾಹೀರಾತು |
| 22 | ಪೊಲೀಸ್ ಸ್ಮರಣಾ ದಿನಾಚರಣೆ ಕುರಿತು ಪತ್ರಿಕಾ ಜಾಹೀರಾತು |
| 23 | ಕಿತ್ತೂರು ಉತ್ಸವ ಕುರಿತು ಪತ್ರಿಕಾ ಜಾಹೀರಾತು |
| 24 | ಕನ್ನಡ ರಾಜ್ಯೋತ್ಸವ ಸಮಾರಂಭ ಕುರಿತು ಪತ್ರಿಕಾ ಪ್ರಕಟಣೆ |
| 25 | ಮಿನಿ ಒಲಂಪಿಕ್ ಗೇಮ್ಸ್ 2024 ರಿಂದ ಪತ್ರಿಕಾ ಜಾಹೀರಾತು ಕುರಿತು |

| | |
|---|---|
| 26 | ತುಮಕೂರು ಜಿಲ್ಲಾ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಕುರಿತು ಜಾಹೀರಾತು |
| 27 | ಸುಧಾ ಹಾಗೂ ಕನ್ನಡ ಪ್ರಭ ಪತ್ರಿಕೆಯವರ ದೀಪಾವಳಿ ವಿಶೇಷಾಂಕ |
| 28 | ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ 62ನೇ ಉತ್ಥಾನ ದಿನಾಚರಣೆ ಜಾಹೀರಾತು ಕುರಿತು |
| 29 | 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳ ಕಾರ್ಯಕ್ರಮ ಕುರಿತು ಪತ್ರಿಕಾ ಜಾಹೀರಾತು |
| 30 | 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳ ಸಮಾರೋಪ ಕಾರ್ಯಕ್ರಮ ಕುರಿತು ಪತ್ರಿಕಾ ಜಾಹೀರಾತು |
| 31 | ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸ ಸಮಾರಂಭ ಪ್ರಯುಕ್ತ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಪುತ್ಥಳಿ ಅನಾವರಣ ಕಾರ್ಯಕ್ರಮ ಕುರಿತು ಜಾಹೀರಾತು |
| 32 | ಚಿತ್ರಸಂತೆ ಕಾರ್ಯಕ್ರಮದ ಕುರಿತು |
| 33 | ಯುವ ಸಬಲೀಕರಣ ಮತ್ತು ಕ್ರೀಡಾಕೂಟ ವತಿಯಿಂದ ನಡೆದ ಮಿನಿ ಒಲಂಪಿಕ್ಸ್ ಉದ್ಘಾಟಣಾ ಕಾರ್ಯಕ್ರಮ ಕುರಿತು ಜಾಹೀರಾತು |
| 34 | ಬೆಳಗಾವಿ ಕಾಂಗ್ರೆಸ್ ಸಮಾವೇಶದ ಶತಮಾನೋತ್ಸವದ ಸ್ಮರಣಾರ್ಥವಾಗಿ ಮಹಾತ್ಮಗಾಂಧಿ ಪ್ರತಿಮೆಯ ಅನಾವರಣ ಕಾರ್ಯಕ್ರಮ ಕುರಿತು ಜಾಹೀರಾತು. |
| 35 | ಬೆಳಗಾವಿ ಕಾಂಗ್ರೆಸ್ ಸಮಾವೇಶದ ಶತಮಾನೋತ್ಸವದ ಸ್ಮರಣಾರ್ಥವಾಗಿ ಗಾಂಧಿ ಭಾರತ ಮರುನಿರ್ಮಾಣ ಮತ್ತು ಮಹಾತ್ಮಗಾಂಧಿ ಪ್ರತಿಮೆಯ ಅನಾವರಣ ಕಾರ್ಯಕ್ರಮ ಕುರಿತು |
| 36 | ನಾಡಿನ ಜನತೆಗೆ 76 ನೇ ಗಣರಾಜ್ಯೋತ್ಸವ ಶುಭ ಕೋರುವ ಕುರಿತ ಪತ್ರಿಕಾ ಜಾಹೀರಾತು |
| 37 | ಬೆಂಗಳೂರು ಅಂತರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭ ಕುರಿತು ಪತ್ರಿಕಾ ಜಾಹೀರಾತು |
| 38 | ಬೆಂಗಳೂರು ಅಂತರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿ ಹಾಗೂ ಸಮಾರೋಪ ಸಮಾರಂಭ ಕುರಿತು ಪತ್ರಿಕಾ ಜಾಹೀರಾತು |
| 39 | ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕುರಿತು ಪತ್ರಿಕಾ ಜಾಹೀರಾತು |
| 40 | ಸರ್ಕಾರದ ಯೋಜನೆಗಳ ಕುರಿತು ವಾರ್ತಾ ಭಾರತಿ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಣೆ |

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2023-24ನೇ ಸಾಲಿನಲ್ಲಿ ಟಿ.ವಿ.ವಾಹಿನಿಗಳಿಗೆ ಬಿಡುಗಡೆ ಮಾಡಲಾದ ಜಾಹೀರಾತು ವಿವರ.**

| ಕ್ರ.ಸಂ | ವಿಷಯ |
|---|---|
| 1 | ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳ ಕುರಿತು IEC ಮಾಹಿತಿಯುಳ್ಳ 30 ಸೆಕೆಂಡ್ ಅವಧಿಯ ಜಾಹೀರಾತುಗಳನ್ನು ಟಿವಿ ವಾಹಿನಿಗಳಲ್ಲಿ ಪ್ರಸಾರ ಮಾಡುವ ಕುರಿತು |
| 2 | ಸರ್ಕಾರದ ಸಾಧನೆಗಳ ಕುರಿತ ಮಾನ್ಯ ಮುಖ್ಯಮಂತಿಗಳ ಸಂದರ್ಶನದ ವಿಶೇಷ ಕಾರ್ಯಕ್ರಮವನ್ನು ಟಿ.ವಿ ವಾಹಿನಿಗಳಲ್ಲಿ ಪ್ರಸಾರ ಮಾಡುವ ಬಗ್ಗೆ |
| 3 | ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳ ಕುರಿತ ICE ಮಾಹಿತಿಯುಳ್ಳ 90 ಸೆಕೆಂಡ್ ಅವಧಿಯ ಜಾಹೀರಾತುಗಳನ್ನು ಟಿವಿ ವಾಹಿನಿಗಳಲ್ಲಿ ಪ್ರಸಾರ ಮಾಡುವ ಕುರಿತು. |
| 4 | ಸರ್ಕಾರದ 100 ದಿವಸಗಳ ಸಾಧನೆ ಕುರಿತು ಸನ್ಮಾನ್ಯ ಸಚಿವರ 30 ನಿಮಿಷ ಅವಧಿಯ ವಿಶೇಷ ಸಂದರ್ಶನ ಕಾರ್ಯಕ್ರಮವನ್ನು ಪ್ರಸಾರ ಮಾಡುವ ಕುರಿತು |
| 5 | ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳ ಕುರಿತು IEC ಮಾಹಿತಿಯುಳ್ಳ 40 ಸೆಕೆಂಡ್ ಅವಧಿಯ ಜಾಹೀರಾತುಗಳನ್ನು ಟಿ.ವಿ ವಾಹಿನಿಗಳಲ್ಲಿ ಪ್ರಸಾರ ಮಾಡುವ ಕುರಿತು. |
| 6 | ದಿನಾಂಕ:30-08-2023 ಮೈಸೂರಿನಲ್ಲಿ ನಡೆದ ಗೃಹಲಕ್ಷ್ಮೀ ಯೋಜನೆಯ ಚಾಲನೆ ಕಾರ್ಯಕ್ರಮವನ್ನು ಟಿವಿ ವಾಹಿನಿಗಳಲ್ಲಿ 60 ನಿಮಿಷ ಅವಧಿಯ ನೇರ ಪ್ರಸಾರ ಕುರಿತು |
| 7 | ದಿನಾಂಕ:15-09-2023ರಂದು ನಡೆದ ಸಂವಿಧಾನ ಪೀಠಿಕೆ ವಾಚನ ಕಾರ್ಯಕ್ರಮ ಹಾಗೂ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಸಂಭ್ರಮಾಚರಣೆ ಕಾರ್ಯಕ್ರಮ ಕುರಿತು ಟಿವಿ ವಾಹಿನಿಗಳಲ್ಲಿ ಪ್ರಸಾರ |
| 8 | ಗಾಂಧಿ ಜಯಂತಿ ಆಚರಣೆ ಸಂಬಂಧ ಸನ್ಮಾನ್ಯ ಮುಖ್ಯಮಂತ್ರಿಗಳು ಶುಭಾಶಯ ಕೋರುವ 30 ಸೆಕೆಂಡ್ ಅವಧಿಯ ಜಾಹೀರಾತುಗಳನ್ನು ಟಿವಿ ವಾಹಿನಿಗಳಲ್ಲಿ ಪ್ರಸಾರ ಮಾಡುವ ಕುರಿತು. |
| 9 | ಮೈಸೂರು ದಸರಾ ಆಚರಣೆ ಕುರಿತ 30 ಸೆಕೆಂಡ್ ಅವಧಿಯ ಜಾಹೀರಾತನ್ನು ಟಿವಿ ವಾಹಿನಿಗಳಲ್ಲಿ ಪ್ರಸಾರ ಮಾಡುವ ಕುರಿತು |
| 10 | ಮೈಸೂರು ದಸರಾ ವಿಜಯದಶಮಿ-ಜಂಬೂಸವಾರಿ ಕುರಿತ 30 ಸೆಕೆಂಡ್ ಅವಧಿಯ ಜಾಹೀರಾತನ್ನು ಟಿವಿ ವಾಹಿನಿಗಳಲ್ಲಿ ಪ್ರಸಾರ ಮಾಡುವ ಕುರಿತು. |

| | |
|---|---|
| 11 | 50ನೇ ಕನ್ನಡ ರಾಜ್ಯೋತ್ಸವ ಆಚರಣೆ ಸಂಬಂಧ ಸನ್ಮಾನ್ಯ ಮುಖ್ಯಮಂತ್ರಿಗಳು ಶುಭಾಶಯ ಕೋರುವ 40 ಸೆಕೆಂಡ್ ಅವದಿಯ ಜಾಹೀರಾತನ್ನು ಟಿವಿ ವಾಹಿನಿಗಳಲ್ಲಿ ಪ್ರಸಾರ ಕುರಿತು |
| 12 | ಜನಸ್ಪಂದನ ಕಾರ್ಯಕ್ರಮ ಕುರಿತು ಟಿ.ವಿ. ವಾಹಿನಿಗಳಲ್ಲಿ ಪ್ರಸಾರ |
| 13 | ನ್ಯೂಸ್ ಫಸ್ಟ್ ಹಮ್ಮಿಕೊಂಡ "ಕನ್ನಡ ಹಬ್ಬ" ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ ನೀಡುವ ಕುರಿತು |
| 14 | ನ್ಯೂಸ್ 18 ಕನ್ನಡ ವಾಹಿನಿಯವರ Rising Karnataka ಸಮಾವೇಶಕ್ಕೆ ಪ್ರಾಯೋಜಕತ್ವ |
| 15 | ಸರ್ಕಾರದ ಯೋಜನೆಗಳ ಕುರಿತು ವಿಶೇಷ ಕಾರ್ಯಕ್ರಮವನ್ನು ಸುವರ್ಣ ನ್ಯೂಸ್ ಸುದ್ದಿ ವಾಹಿನಿಯಲ್ಲಿ ಪ್ರಸಾರ |
| 16 | ದಿನಾಂಕ:12-01-2024ರಂದು ಶಿವಮೊಗ್ಗ ನಡೆದ ಯುವನಿಧಿ ಯೋಜನೆಯ ಪ್ರಾರಂಭೋತ್ಸವ ಹಾಗೂ ಚಾಲನಾ ಕಾರ್ಯಕ್ರಮವನ್ನು ಟಿ.ವಿ. ವಾಹಿನಿಗಳಲ್ಲಿ ನೇರ ಪ್ರಸಾರ ಕುರಿತು |
| 17 | ಸಂಕ್ರಾಂತಿ ಹಬ್ಬದ ಪ್ರಯುಕ್ತ ಸನ್ಮಾನ್ಯ ಮುಖ್ಯಮಂತ್ರಿಗಳ ನಾಡಿನ ಜನತೆಗೆ ಶುಭಾಶಯ ಕೋರುವ 40 ಸೆಕೆಂಡ್ ಅವಧಿಯ ಜಾಹೀರಾತುಗಳನ್ನು ಟಿವಿ ವಾಹಿನಿಗಳಲ್ಲಿ ಪ್ರಸಾರ ಮಾಡುವ ಕುರಿತು. |
| 18 | ಸರ್ಕಾರದ ಜಾರಿಗೆ ತಂದಿರುವ ಯುವನಿಧಿ ಯೋಜನೆ ಕುರಿತು 30 ನಿಮಿಷ ಅವಧಿಯ ವಿಶೇಷ ಸಂದರ್ಶನ ಕಾರ್ಯಕ್ರಮವನ್ನು ಪ್ರಸಾರ ಮಾಡುವ ಕುರಿತು. |
| 19 | ಗಣರಾಜ್ಯೋತ್ಸವ ಅಂಗವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳ ನಾಡಿನ ಜನತೆಗೆ ಶುಭಾಶಯ ಕೋರುವ 30 ಸೆಕೆಂಡ್ ಅವಧಿಯ ಜಾಹೀರಾತುಗಳನ್ನು ಟಿವಿ ವಾಹಿನಿಗಳಲ್ಲಿ ಪ್ರಸಾರ ಮಾಡುವ ಕುರಿತು |
| 20 | ವಿಜಯಪುರದಲ್ಲಿ ನಡೆದ ವಿವಿಧ ಇಲಾಖೆಗಳ ಕಾಮಗಾರಿಗಳ ಉದ್ಘಾಟನೆ / ಶಂಕುಸ್ಥಾಪನೆ ಕಾರ್ಯಕ್ರಮ ಹಾಗೂ ಸರ್ಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮವನ್ನು ಟಿವಿ ವಾಹಿನಿಗಳಲ್ಲಿ ನೇರ ಪ್ರಸಾರ ಕುರಿತು |
| 21 | ದಿನಾಂಕ:07-02-2024ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ದೆಹಲಿ ಪ್ರವಾಸ ಮಾಡಿದ್ದು, ಸದರಿ ಪ್ರವಾಸದ ಕುರಿತು ಸುದ್ದಿ ವಾಹಿನಗಳಲ್ಲಿ ನೇರ ಪ್ರಸಾರ |
| 22 | ರಿಪಬ್ಲಿಕ್ ಟಿ.ವಿ.ರವರಿಂದ ನಿಸಾರ್ ಅಹಮ್ಮದ್ ರವರ ಸಂದರ್ಶನ ಪ್ರಸಾರ ಕುರಿತು |
| 23 | ಎರಡನೇ ಅವಧಿಯ ಜನಸ್ಪಂದನ ಕಾರ್ಯಕ್ರಮ ಕುರಿತ 40 ಸೆಕೆಂಡ್ ಅವಧಿಯ ಜಾಹೀರಾತುಗಳನ್ನು ಟಿವಿ ವಾಹಿನಿಗಳಲ್ಲಿ ಪ್ರಸಾರ ಮಾಡುವ ಕುರಿತು. |
| 24 | ದಿನಾಂಕ: 08-02-2024 ರಂದು ಮಾನ್ಯ ಮುಖ್ಯಮಂತ್ರಿಗಳು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವ ಜನಸ್ಪಂದನ ಕಾರ್ಯಕ್ರಮದ ಕುರಿತು ಟಿವಿ ವಾಹಿನಿಗಳಲ್ಲಿ 30 ನಿಮಿಷ ಅವದಿಯ ನೇರ ಪ್ರಸಾರ ಕುರಿತು. |
| 25 | ಜನಸ್ಪಂದನ ಕಾರ್ಯಕ್ರಮ ಕುರಿತು 30 ನಿಮಿಷ ಅವಧಿಯ ಎರಡು ಕಾರ್ಯಕ್ರಮಗಳ ಪ್ರಸಾರ ಕುರಿತು. |
| 26 | ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳ ಕುರಿತ 30 ನಿಮಿಷ ಅವಧಿಯ ವಿಶೇಷ ಕಾರ್ಯಕ್ರಮವನ್ನು ಪ್ರಸಾರ ಮಾಡುವ ಕುರಿತು, |
| 27 | ದಿನಾಂಕ: 16-02-2024 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಆಯವ್ಯಯ ಕುರಿತು 30 ನಿಮಿಷ ಅವಧಿಯ ಎರಡು ವಿಶೇಷ ಕಾರ್ಯಕ್ರಮಗಳ ಪ್ರಸಾರ ಕುರಿತು. |
| 28 | ದಿನಾಂಕ: 18-02-2024 ರಂದು ಮಳವಳ್ಳಿ ತಾಲ್ಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಉದ್ಘಾಟನೆ ಕಾರ್ಯಕ್ರಮಗಳನ್ನು ಟಿವಿ ವಾಹಿನಿಗಳಲ್ಲಿ 30 ನಿಮಿಷ ಅವಧಿಯ ನೇರ ಪ್ರಸಾರ ಕುರಿತು. |
| 29 | ವೃಷಭಾವತಿ ಏತ ನೀರಾವರಿ ಯೋಜನೆಯ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಟಿ.ವಿ.ವಾಹಿನಿಗಳಲ್ಲಿ ಪ್ರಸಾರ ಮಾಡುವ ಬಗ್ಗೆ, |
| 30 | ಸರ್ಕಾರದ ಯೋಜನೆಗಳ ಕುರಿತಾದ 30 ಸೆಕೆಂಡ್ ಅವಧಿಯ ಟಿ.ವಿ.ಸ್ಪಾಟ್ಸ್ ಗಳನ್ನು ಟಿ.ವಿ.ವಾಹಿನಿಗಳಲ್ಲಿ ಪ್ರಸಾರ ಮಾಡುವ ಕುರಿತು |
| 31 | ಮಂಡ್ಯ ಜಿಲ್ಲೆಯ ವಿವಿಧ ಸರ್ಕಾರಿ ಕಾಮಗಾರಿಗಳ ಉದ್ಘಾಟನಾ ಮತ್ತು ಶಂಕುಸ್ಥಾಪನೆ ಹಾಗೂ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮವನ್ನು ಟಿ.ವಿ.ವಾಹಿನಿಗಳಲ್ಲಿ 30 ನಿಮಿಷ ಅವಧಿಯ ನೇರ ಪ್ರಸಾರ ಕುರಿತು |
| 32 | ಚಿಂತಾಮಣಿಯಲ್ಲಿ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ಕಾರ್ಯಕ್ರಮವನ್ನು ಟಿ.ವಿ.ವಾಹಿನಿಗಳಲ್ಲಿ 30 ನಿಮಿಷ ಅವಧಿಯ ನೇರ ಪ್ರಸಾರ ಕುರಿತು |
| 33 | ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮದ 30 ನಿಮಿಷ ನೇರ ಪ್ರಸಾರ ( ಮೈಸೂರು ) |

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2024-25ನೇ ಸಾಲಿನಲ್ಲಿ ಟಿ.ವಿ.ವಾಹಿನಿಗಳಿಗೆ ಬಿಡುಗಡೆ ಮಾಡಲಾದ ಜಾಹೀರಾತು ವಿವರ**

| ಕ್ರ.ಸಂ | ಜಾಹೀರಾತು ವಿಷಯ |
|---|---|
| 1 | ರಾಜ್ಯ ಸರ್ಕಾರದ ಯೋಜನೆಗಳು ಕುರಿತು ಹಾಗೂ ಇತರೆ ಕಾರ್ಯಕ್ರಮಗಳ ಕುರಿತು ವಿಶೇಷ ಕಾರ್ಯಕ್ರಮ ಪ್ರಸಾರ. |
| 2 | ಸರ್ಕಾರದ ಯೋಜನೆಗಳ ಕುರಿತು ಸನ್ಮಾನ್ಯ ಮುಖ್ಯಮಂತ್ರಿಗಳ 30 ನಿಮಿಷ ಅವಧಿಯ ವಿಶೇಷ ಸಂದರ್ಶನ ಕಾರ್ಯಕ್ರಮವನ್ನು ಟಿವಿ ವಾಹಿನಿಯಲ್ಲಿ ಪ್ರಸಾರ |
| 3 | ಸನ್ಮಾನ್ಯ ಮುಖ್ಯಮಂತ್ರಿಗಳ ಕೆ.ಆರ್.ಎಸ್. ಜಲಾಶಯಕ್ಕೆ ಪೂಜೆ ಬಾಗಿನ ಅರ್ಪಿಸುವ ಕುರಿತು ಟಿವಿ ವಾಹಿನಿಯಲ್ಲಿ ಪ್ರಸಾರ |
| 4 | ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಸನ್ಮಾನ್ಯ ಮುಖ್ಯಮಂತ್ರಿಗಳ ನಾಡಿನ ಜನತೆಗೆ ಶುಭಾಶಯ ಕೋರಿರುವ 30 ಸೆಕೆಂಡ್ ಅವಧಿಯ ಜಾಹೀರಾತು ಟಿವಿ ವಾಹಿನಿಗಳಲ್ಲಿ ಪ್ರಸಾರ |
| 5 | ಸರ್ಕಾರದ ಯೋಜನೆಗಳ ಕುರಿತು ವಿಶೇಷ ಕಾರ್ಯಕ್ರಮಗಳ ಟಿವಿ ವಾಹಿನಿಗಳಲ್ಲಿ ಪ್ರಸಾರ |
| 6 | ಸನ್ಮಾನ್ಯ ಮುಖ್ಯಮಂತ್ರಿಗಳ ಭಾಗವಹಿಸಿದ ಮಳವಳ್ಳಿಯಲ್ಲಿ ಗಗನಚುಕ್ಕಿ ಜಲಪಾತೋತ್ಸವ-2024ರ ಕಾರ್ಯಕ್ರಮದ ನೇರ ಪ್ರಸಾರ |
| 7 | ಮಹಾತ್ಮಾಗಾಂದಿ ಸೇವಾ ಪ್ರಶಸ್ತಿ, ಹಣಮಂತರಾಯ ಪತ್ರಿಕೋದ್ಯಮ ಪ್ರಸಸ್ತಿ ಪ್ರಧಾನ ಸಮಾರಂಭ ಪ್ರಸಾರ. |
| 8 | ಸನ್ಮಾನ್ಯ ಮುಖ್ಯಮಂತ್ರಿಗಳು ಗಾಂಧಿ ಜಯಂತಿ ಪ್ರಯುಕ್ತ ನಾಡಿನ ಜನತಗೆ ಶುಭಾಶಯ ಕೋರುವ 30 ಸೆಕೆಂಡ್ ಅವಧಿಯ ಜಾಹೀರಾತು ಪ್ರಸಾರ. |
| 9 | ಸನ್ಮಾನ್ಯ ಮುಖ್ಯಮಂತ್ರಿಗಳು ಮೈಸೂರು ದಸರಾ ಹಬ್ಬದ ಕುರಿತು ನಾಡಿನ ಜನತಗೆ ಶುಭಾಶಯ ಕೋರುವ 30 ಸೆಕೆಂಡ್ ಅವಧಿಯ ಜಾಹೀರಾತು ಪ್ರಸಾರ . |
| 10 | ಸರ್ಕಾರದ ಗ್ಯಾರಂಟಿ ಯೋಜನೆಗಳ ಕುರಿತು ವಿಶೇಷ ಕಾರ್ಯಕ್ರಮಗಳ ಪ್ರಸಾರ |
| 11 | ಸನ್ಮಾನ್ಯ ಮುಖ್ಯಮಂತ್ರಿಗಳ ಗೋಕಾರ ಚಳುವಳಿ ಹಿನ್ನೋಟ-ಮುನ್ನೋಟ ಕಾರ್ಯಕ್ರಮ ಉದ್ಘಾಟಿಸಿರುವ ನೇರ ಪ್ರಸಾರ |
| 12 | ಅಂದು ದೇವರಾಜ ಅರಸು ರವರಂತೆ ಇಂದು ಮಾನ್ಯ ಮುಖ್ಯಮಂತ್ರಿಗಳು ಜಾರಿಗೆ ತಂದಿರುವ ಯೋಜನೆಗಳ ಕುರಿತು ಟಿ.ವಿ.ವಾಹಿನಿಗಳಲ್ಲಿ ವಿಶೇಷ ಕಾರ್ಯಕ್ರಮ ಪ್ರಸಾರ |
| 13 | ಸರ್ಕಾರದ ಯೋಜನ ಕುರಿತು ವಿಶೇಷ ಕಾರ್ಯಕ್ರಮಗಳ ಕುರಿತು ಪ್ರಸಾರ |
| 14 | ತುಮಕೂರು ಜಿಲ್ಲಾ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ವಿರತಣಾ ಕಾರ್ಯಕ್ರಮದ ನೇರ ಪ್ರಸಾರ ಕುರಿತ. |
| 15 | ಸರ್ಕಾರ ಯೋಜನೆ ಕುರಿತು ವಿಶೇಷ ಕಾರ್ಯಕ್ರಮ ಕುರಿತು ಟಿ.ವಿ.ವಾಹಿನಿಗಳಲ್ಲಿ ಪ್ರಸಾರ. |
| 16 | ದಿನಾಂಕ:07-12-2024 ರಿಂದ 09-12-2024 ರವರೆಗೆ ಬೆಂಗಳೂರಿನಲ್ಲಿ ನಡೆಯುವ ಬೆಂಗಳೂರು ಹಬ್ಬ ಕಾರ್ಯಕ್ರಮ 60 ಸೆಕೆಂಡ್ ಅವಧಿಯ ಜಾಹೀರಾತು ಪ್ರಸಾರ |
| 17 | ದಿನಾಂಕ: 20-12-2024ರಂದು ಮಂಡ್ಯ ಜಿಲ್ಲೆಯಲ್ಲಿ ನಡೆಯಲ್ಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮ ಪ್ರಸಾರ. |
| 18 | ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಮಾರಂಭ ಪ್ರಯುಕ್ತ ಗಾಂಧಿ ಪತ್ರಿಕೆ ಅನಾವರಣ ಕಾರ್ಯಕ್ರಮ 70 ಸೆಕೆಂಡ್ ಅವಧಿಯ ಜಾಹೀರಾತನ್ನು ಟಿವಿ ವಾಹಿನಿಗಳಲ್ಲಿ ಪ್ರಸಾರ |
| 19 | ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸ ಸಮಾರಂಭ ಪ್ರಯುಕ್ತ ಗಾಂಧಿ ಪ್ರತಿಮೆ ಅನಾವರಣ ಕಾರ್ಯಕ್ರಮ 45 ಸೆಕೆಂಡ್ ಅವಧಿಯ ಜಾಹೀರಾತು ಟಿವಿ ವಾಹಿನಿಗಳಲ್ಲಿ ಪ್ರಸಾರ |
| 20 | ಗಣರಾಜ್ಯೋತ್ಸವ ಸಂಬಂಧ ಸನ್ಮಾನ್ಯ ಮುಖ್ಯಮಂತ್ರಿಗಳು ನಾಡಿನ ಜನತಗೆ ಶುಭಾಷಯ 30 ಸೆಕೆಂಡ್ ಅವಧಿಯ ಜಾಹೀರಾತು ಟಿವಿ ವಾಹಿನಿಗಳಲ್ಲಿ ಪ್ರಸಾರ |
| 21 | 21-01-2025ರಂದು ಬೆಳಗಾವಿಯಲ್ಲಿ ನಡೆಯಲ್ಲಿರುವ ಗಾಂದಿ ಶತಮಾನೋತ್ಸವ ಕಾರ್ಯಕ್ರಮ ಕುರಿತು ನೇರ ಪ್ರಸಾರ. |
| 22 | 16 ನೇ ಅಂತರಾಷ್ಟ್ರೀಯ ಚಲನಚಿತ್ರೋತ್ಸವ ಸಮಾರಂಭವನ್ನು ಟಿ.ವಿ. ವಾಹಿನಿಗಳಲ್ಲಿ ನೇರಪ್ರಸಾರ |
| 23 | ರಾಜ್ಯ ಸರ್ಕಾರದ ಬಜೆಟ್ ಮಂಡನೆ ಕುರಿತು ಟಿ.ವಿ.ವಾಹಿನಿಗಳಲ್ಲಿ ಪ್ರಸಾರ |
| 24 | ಗೃಹ ಲಕ್ಷ್ಮಿ ಯೋಜನೆ ಕುರಿತ ವಿಶೇಷ ಕಾರ್ಯಕ್ರಮವನ್ನು ಟಿ.ವಿ.ವಾಹಿನಿಗಳಲ್ಲಿ ಪ್ರಸಾರ |